ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ ದೂರವಾಣಿ : 08156-277011
ಇ-ಮೇಲ್ : ceo-ckbpur-ka@nic.in ಏಕೀಕೃತ ಸಹಾಯವಾಣಿ: 8277506000

ಸಂಖ್ಯೆ: CKBZP-14013(19)/41/2024-CKMZP-CHIKKABALLAPURA ZILLA PANCHAYAT ದಿನಾಂಕ: 10.06.2024

ಇವರಿಗೆ,
ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯತಿ,
ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ,
ಗೌರಿಬಿದನೂರು, ಗುಡಿಬಂಡೆ, ಶಿಡ್ಲಘಟ್ಟ

ಮಾನ್ಯರೇ,

**ವಿಷಯ:** ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೂಲಿಕಾರರನ್ನು ಸಂಘಟಿಸಲು ಹೆಚ್ಚುವರಿಯಾಗಿ ಸಕ್ರಿಯ ಹೊಸ ಕಾಯಕ ಬಂಧು ರವರನ್ನು ಗುರುತಿಸಿ ಎಂ.ಐ.ಎಸ್ ನಲ್ಲಿ ಇಂಧೀಕರಿಸುವ ಬಗ್ಗೆ.

**ಉಲ್ಲೇಖ:** ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ರವರ ಪತ್ರ ಸಂಖ್ಯೆ: ಗ್ರಾಅಪ/114/ಉಖಾಯೋ2024 (ಇ-1339697) ದಿನಾಂಕ: 24.05.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೂಲಿಕಾರರನ್ನು ಸಂಘಟಿಸಲು ಪ್ರತಿ 50 ಕೂಲಿಕಾರರ ಗುಂಪಿಗೆ ಒಂದು ಕಾಯಕ ಸಂಘವನ್ನಾಗಿ ರಚಿಸಿ ಆ ಸಂಘಕ್ಕೆ ಒಬ್ಬರನ್ನು ಕಾಯಕ ಬಂಧುವಾಗಿ ನೇಮಕ ಮಾಡಿ, ಎಮ್ ಐಎಸ್‌ನಲ್ಲಿ ಇಂದೀಕರಿಸಲು ಉಲ್ಲೇಖಿತ ಪತ್ರದಲ್ಲಿ ಸೂಚಿಸಿದಂತೆ ಎಲ್ಲಾ ಜಿಲ್ಲೆಗಳಿಂದ 1,85.842 ಮೇಟ್‌ಗಳ ಮಾಹಿತಿಯನ್ನು ಇಂದೀಕರಿಸಿರುವುದು ಸರಿಯಷ್ಟೆ. ಈ ಕಾಯಕ ಬಂಧುಗಳಲ್ಲಿ ಶೇ 50 ಕ್ಕಿಂತ ಹೆಚ್ಚು ಸಕ್ರಿಯವಲ್ಲದ ಕಾಯಕಬಂಧುಗಳ ಮಾಹಿತಿಯನ್ನು ಇಂದೀಕರಿಸಿರುವುದು ಸರ್ವೇ ಮೂಲಕ ತಿಳಿದು ಬಂದಿರುತ್ತದೆ.

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಮಹಿಳಾ ಕೂಲಿಕಾರರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಹಾಗೂ ಕಾಯಕ ಸಂಘಗಳನ್ನು ಸಕ್ರಿಯಗೊಳಿಸುವ ಸಲುವಾಗಿ ಸರ್ಕಾರೇತರ ಸ್ವಯಂ ಸಂಸ್ಥೆಗಳ ಸಹಯೋಗದಲ್ಲಿ ಕಾಯಕಬಂಧುಗಳಿಗೆ ತರಬೇತಿ ನೀಡಲು ತಮ್ಮ ಜಿಲ್ಲೆಗಳಿಂದ 50 ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದು, ಈ ತಾಲ್ಲೂಕುಗಳಲ್ಲಿ ಮೊದಲನೇ ಹಂತವಾಗಿ 15,000 ಕಾಯಕಬಂಧುಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಸದರಿ ತಾಲ್ಲೂಕುಗಳಲ್ಲಿ ಈಗಾಗಲೇ ಇಂದೀಕರಿಸಿರುವ ಸಕ್ರಿಯ ಕಾಯಕಬಂಧುಗಳ ಜೊತೆ ಇನ್ನೂ ಹೆಚ್ಚುವರಿಯಾಗಿ ಸಕ್ರಿಯ ಕಾಯಕಬಂಧುಗಳು ಅವಶ್ಯಕತೆ ಇರುತ್ತದೆ. ಈ ಹಿನ್ನಲೆಯಲ್ಲಿ ಇದರೊಂದಿಗೆ ಲಗತ್ತಿಸಿರುವ ನಮೂನೆಯಂತೆ ಹೆಚ್ಚುವರಿ ಹೊಸ ಕಾಯಕಬಂಧುಗಳನ್ನು ಮುಂದೆ ತಿಳಿಸಿರುವಂತೆ ಗುರುತಿಸಿ ಅವರ ಮಾಹಿತಿಯನ್ನು ಎಮ್ ಐಎಸ್‌ನಲ್ಲಿ ದಿನಾಂಕ:10.06.2024 ರೊಳಗೆ ಕಡ್ಡಾಯವಾಗಿ ಇಂದೀಕರಿಸಲು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

> > 2

1. ಹೆಚ್ಚುವರಿಯಾಗಿ ಗುರುತಿಸುವ ಕಾಯಕಬಂಧು ರವರು ಕಳೆದ ಮೂರು ಆರ್ಥಿಕ ವರ್ಷದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅಕುಶಲ ಕೆಲಸದಲ್ಲಿ ಶೇ. 60 ಕ್ಕಿಂತ ಹೆಚ್ಚು ಸಕ್ರಿಯವಾಗಿ ಭಾಗವಹಿಸಿರಬೇಕು. ಒಂದು ವೇಳೆ ಸಕ್ರಿಯ ಕಾಯಕಬಂಧುವಾಗಿದ್ದು ಶೇ 60 ಕ್ಕಿಂತ ಕಡಿಮೆ ಭಾಗವಹಿಸುವಿಕೆ ಇದ್ದಲ್ಲಿ ಪಿಡಿಒ ರವರಿಂದ ಸಕ್ರಿಯ ಕಾಯಕ ಬಂಧು ಎಂದು ದೃಢೀಕರಣ ಪಡೆಯುವುದು.
2. ಕಾಯಕಬಂಧುಗಳು ಎನ್ಎಮ್ಎಸ್ ಹಾಜರಾತಿ ಸೃಜಿಸಬೇಕಾಗಿರುವುದರಿಂದ ಕನಿಷ್ಠ ಓದಲು ಮತ್ತು ಬರಹ ಜ್ಞಾನ ಹೊಂದಿರತಕ್ಕದ್ದು, ಹೆಚ್ಚಿನ ವಿದ್ಯಾರ್ಹತೆ ಹೊಂದಿದರವರಿಗೆ ಆದ್ಯತೆ ನೀಡುವುದು.
3. ಹೆಚ್ಚುವರಿಯಾಗಿ ಗುರುತಿಸುವ ಕಾಯಕ ಬಂಧುಗಳಲ್ಲಿ ಶೇ.60ಕ್ಕಿಂತ ಹೆಚ್ಚು ಮಹಿಳಾ ಕಾಯಕ ಬಂಧುಗಳಾಗಿರತಕ್ಕದ್ದು.
4. ಕಾಯಕ ಬಂಧುವನ್ನು ಒಮ್ಮತವಾಗಿ ಗುರುತಿಸುವಾಗ ಕೂಲಿಕಾರರಿಗೆ ಮಾಹಿತಿ ನೀಡಿ ಸಂಘಟಿಸುವ ಚತುರತೆ ಹೊಂದಿರುವವರನ್ನು ಆಯ್ಕೆ ಮಾಡುವುದು. ಇವರು ಕಾಯಕಬಂಧುವಾಗಿ ಆಯ್ಕೆಯಾಗಿ ತರಬೇತಿ ಪಡೆದ ನಂತರ ನಿಷ್ಕ್ರಿಯರಾಗದಂತೆ ನೋಡಿಕೊಳ್ಳುವುದು ಆಯ್ಕೆ ಮಾಡಿದವರ ಜವಾಬ್ದಾರಿಯಾಗಿರುತ್ತದೆ.

ಅದರಂತೆ, ತಮ್ಮ ತಾಲ್ಲೂಕುಗಳಲ್ಲಿ ಈಗಾಗಲೇ ಇಂದೀಕರಿಸಿರುವ ಸಕ್ರಿಯ ಕಾಯಕಬಂಧುಗಳನ್ನು ಜೊತೆ ಇನ್ನೂ ಹೆಚ್ಚುವರಿಯಾಗಿ ಮೇಲ್ಕಂಡ ನಿಯಮಗಳನುಸಾರ ಸಕ್ರಿಯ ಕಾಯಕಬಂಧುಗಳನ್ನು ಗುರುತಿಸಿ ನಿಗಧಿತ ನಮೂನೆಯಂತೆ ಮಾಹಿತಿಯನ್ನು ದಿನಾಂಕ: 10.06.2024 ರೊಳಗಾಗಿ ಎಮ್.ಐ.ಎಸ್ ನಲ್ಲಿ ಇಂಧೀಕರಿಸಲು ಸೂಚಿಸಿದೆ.

**(ಮಾನ್ಯ ಮು.ಕಾ.ನಿ ರವರಿಂದ ಕಛೇರಿ ಟಿಪ್ಪಣಿ ಅನುಮೋದಿಸಲಾಗಿದೆ)**

**ತಮ್ಮ ವಿಶ್ವಾಸಿ,**

10/6/24

**ಉಪ ಕಾರ್ಯದರ್ಶಿ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ**

**ಪ್ರತಿಯನ್ನು:-**

1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲೆಯ ಎಲ್ಲಾ ತಾಲ್ಲೂಕು ಸಹಾಯಕ ನಿರ್ದೇಶಕರು (ಗ್ರಾ.ಉ) ರವರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
5ನೇ ಮಹಡಿ, ಪ್ಲಾಟ್ ನಂ-1234,ಕೆ.ಎಸ್.ಐ.ಐ.ಡಿ.ಸಿ, ಐ.ಟಿ.ಪಾರ್ಕ್, ಸೌತ್ ಬ್ಲಾಕ್,
ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು
ದೂ. 080-22372738 E-mail: iecrdpr@gma.il.com


ಸಂಖ್ಯೆ:ಗ್ರಾಅಪ114ಉಖಾಯೋ2024(ಇ-1339697) ದಿನಾಂಕ: 24.05.2024

ರವರಿಗೆ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಬಾಗಲಕೋಟೆ, ಬೀದರ್, ಕಲ್ಬುರ್ಗಿ,ಯಾದಗಿರಿ,
ರಾಯಚೂರು, ಕೊಪ್ಪಳ, ಧಾರವಾಡ, ಬೆಳಗಾವಿ,
ಬಳ್ಳಾರಿ, ವಿಜಯನಗರ, ವಿಜಯಪುರ, ಚಿತ್ರದುರ್ಗ,
ದಾವಣಗೆರೆ, ಚಿಕ್ಕಬಳ್ಳಾಪುರ, ಚಾಮರಾಜನಗರ,
ಕೋಲಾರ, ರಾಮನಗರ,ಮೈಸೂರು, ಮಂಡ್ಯ, ಉತ್ತರಕನ್ನಡ

ಮಾನ್ಯರೇ,

ವಿಷಯ: ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೂಲಿಕಾರರನ್ನು ಸಂಘಟಿಸಲು ಹೆಚ್ಚುವರಿಯಾಗಿ ಸಕ್ರಿಯ ಹೊಸ ಕಾಯಕ ಬಂಧುರವರನ್ನು ಗುರುತಿಸಿ ಎಮ್‌ಐಎಸ್‌ನಲ್ಲಿ ಇಂದೀಕರಿಸುವ ಬಗ್ಗೆ.

ಉಲ್ಲೇಖ: ಆರ್‌ಡಿಸಿ-ಇಜಿಎಸ್/51/2021(ಇ-442265) ದಿನಾಂಕ:17.12.2022

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೂಲಿಕಾರರನ್ನು ಸಂಘಟಿಸಲು ಪ್ರತಿ 50 ಕೂಲಿಕಾರರ ಗುಂಪಿಗೆ ಒಂದು ಕಾಯಕ ಸಂಘವನ್ನಾಗಿ ರಚಿಸಿ ಆ ಸಂಘಕ್ಕೆ ಒಬ್ಬರನ್ನು ಕಾಯಕ ಬಂಧುವಾಗಿ ನೇಮಕ ಮಾಡಿ, ಎಮ್‌ಐಎಸ್‌ನಲ್ಲಿ ಇಂದೀಕರಿಸಲು ಉಲ್ಲೇಖಿತ ಪತ್ರದಲ್ಲಿ ಸೂಚಿಸಿದಂತೆ ಎಲ್ಲಾ ಜಿಲ್ಲೆಗಳಿಂದ 1,85,842 ಮೇಟ್‌ಗಳ ಮಾಹಿತಿಯನ್ನು ಇಂದೀಕರಿಸಿರುವುದು ಸರಿಯಷ್ಟೆ. ಈ ಕಾಯಕ ಬಂಧುಗಳಲ್ಲಿ ಶೇ 50 ಕ್ಕಿಂತ ಹೆಚ್ಚು ಸಕ್ರಿಯವಲ್ಲದ ಕಾಯಕಬಂಧುಗಳ ಮಾಹಿತಿಯನ್ನು ಇಂದೀಕರಿಸಿರುವುದು ಸರ್ವೇ ಮೂಲಕ ತಿಳಿದು ಬಂದಿರುತ್ತದೆ.

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಮಹಿಳಾ ಕೂಲಿಕಾರರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಹಾಗೂ ಕಾಯಕ ಸಂಘಗಳನ್ನು ಸಕ್ರಿಯಗೊಳಿಸುವ ಸಲುವಾಗಿ ಸರ್ಕಾರೇತರ ಸ್ವಯಂ ಸಂಸ್ಥೆಗಳ ಸಹಯೋಗದಲ್ಲಿ ಕಾಯಕಬಂಧುಗಳಿಗೆ ತರಬೇತಿ ನೀಡಲು ತಮ್ಮ ಜಿಲ್ಲೆಗಳಿಂದ 50 ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದು, ಈ ತಾಲ್ಲೂಕುಗಳಲ್ಲಿ ಮೊದಲನೇ ಹಂತವಾಗಿ 15,000 ಕಾಯಕಬಂಧುಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಸದರಿ ತಾಲ್ಲೂಕುಗಳಲ್ಲಿ ಈಗಾಗಲೇ ಇಂದೀಕರಿಸಿರುವ ಸಕ್ರಿಯ ಕಾಯಕಬಂಧುಗಳ ಜೊತೆ ಇನ್ನೂ ಹೆಚ್ಚುವರಿಯಾಗಿ ಸಕ್ರಿಯ ಕಾಯಕಬಂಧುಗಳು ಅವಶ್ಯಕತೆ ಇರುತ್ತದೆ. ಈ ಹಿನ್ನಲೆಯಲ್ಲಿ ಇದರೊಂದಿಗೆ ಲಗತ್ತಿಸಿರುವ ನಮೂನೆಯಂತೆ ಹೆಚ್ಚುವರಿ ಹೊಸ ಕಾಯಕಬಂಧುಗಳನ್ನು ಮುಂದೆ ತಿಳಿಸಿರುವಂತೆ ಗುರುತಿಸಿ ಅವರ ಮಾಹಿತಿಯನ್ನು ಎಮ್‌ಐಎಸ್‌ನಲ್ಲಿ ದಿನಾಂಕ:10.06.2024 ರೊಳಗೆ ಕಡ್ಡಾಯವಾಗಿ ಇಂದೀಕರಿಸಿರುವುದು.

N/C
24/05/24
8657

1. ಹೆಚ್ಚುವರಿಯಾಗಿ ಗುರುತಿಸುವ ಕಾಯಕಬಂಧು ರವರು ಕಳೆದ ಮೂರು ಆರ್ಥಿಕ ವರ್ಷದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅಕುಶಲ ಕೆಲಸದಲ್ಲಿ ಶೇ. 60 ಕ್ಕಿಂತ ಹೆಚ್ಚು ಸಕ್ರಿಯವಾಗಿ ಭಾಗವಹಿಸಿರಬೇಕು. ಒಂದು ವೇಳೆ ಸಕ್ರಿಯ ಕಾಯಕಬಂಧುವಾಗಿದ್ದು ಶೇ 60 ಕ್ಕಿಂತ ಕಡಿಮೆ ಭಾಗವಹಿಸುವಿಕೆ ಇದ್ದಲ್ಲಿ ಪಿಡಿಒ ರವರಿಂದ ಸಕ್ರಿಯ ಕಾಯಕ ಬಂಧು ಎಂದು ದೃಢೀಕರಣ ಪಡೆಯುವುದು.
2. ಕಾಯಕಬಂಧುಗಳು ಎನ್‌ಎಮ್‌ಎಸ್ ಹಾಜರಾತಿ ಸೃಜಿಸಬೇಕಾಗಿರುವುದರಿಂದ ಕನಿಷ್ಠ ಓದಲು ಮತ್ತು ಬರಹ ಜ್ಞಾನ ಹೊಂದಿರತಕ್ಕದ್ದು, ಹೆಚ್ಚಿನ ವಿದ್ಯಾರ್ಹತೆ ಹೊಂದಿದರವರಿಗೆ ಆದ್ಯತೆ ನೀಡುವುದು.
3. ಹೆಚ್ಚುವರಿಯಾಗಿ ಗುರುತಿಸುವ ಕಾಯಕಬಂಧುಗಳಲ್ಲಿ ಶೇ.60ಕ್ಕಿಂತ ಹೆಚ್ಚು ಮಹಿಳಾ ಕಾಯಕಬಂಧುಗಳಾಗಿರತಕ್ಕದ್ದು.
4. ಕಾಯಕಬಂಧುವನ್ನು ಒಮ್ಮತವಾಗಿ ಗುರುತಿಸುವಾಗ ಕೂಲಿಕಾರರಿಗೆ ಮಾಹಿತಿ ನೀಡಿ ಸಂಘಟಿಸುವ ಚತುರತೆ ಹೊಂದಿರುವವರನ್ನು ಆಯ್ಕೆ ಮಾಡುವುದು. ಇವರು ಕಾಯಕಬಂಧುವಾಗಿ ಆಯ್ಕೆಯಾಗಿ ತರಬೇತಿ ಪಡೆದ ನಂತರ ನಿಷ್ಕ್ರಿಯರಾಗದಂತೆ ನೋಡಿಕೊಳ್ಳುವುದು ಆಯ್ಕೆ ಮಾಡಿದವರ ಜವಬ್ದಾರಿಯಾಗಿರುತ್ತದೆ.

ತಮ್ಮ ವಿಶ್ವಾಸಿ,

24/05

ಮುಖ್ಯ ಕಾರ್ಯಚರಣೆ ಅಧಿಕಾರಿ,
ಗ್ರಾಮೀಣಾಭಿವೃದ್ದಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು ಮಾಹಿತಿಗಾಗಿ:**

1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಮಾಹಿತಿಗಾಗಿ
2. ಉಪಕಾರ್ಯದರ್ಶಿ/ಯೋಜನಾ ನಿರ್ದೇಶಕರು, ಬಾಗಲಕೋಟೆ. ಬೀದರ್, ಕಲ್ಬುರ್ಗಿ,ಯಾದಗಿರಿ, ರಾಯಚೂರು, ಕೊಪ್ಪಳ, ಧಾರವಾಡ, ಬೆಳಗಾವಿ ಬಳ್ಳಾರಿ, ವಿಜಯನಗರ, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ಚಾಮರಾಜನಗರ, ಕೋಲಾರ, ರಾಮನಗರ,ಮೈಸೂರು, ಮಂಡ್ಯ, ಉತ್ತರಕನ್ನಡ ರವರ ಮಾಹಿತಿಗಾಗಿ ಹಾಗು ಅಗತ್ಯ ಕ್ರಮಕ್ಕಾಗಿ
3. ಜಂಟಿ ನಿರ್ದೇಶಕರು(ಆಡಳಿತ/ತೋಟಗಾರಿಕೆ/ತಾಂತ್ರಿಕ) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಮಾಹಿತಿಗಾಗಿ.
4. ಕಚೇರಿ ಪ್ರತಿ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಅದಿನಿಯಮ -2005

ಕರ್ನಾಟಕ ಸರ್ಕಾರ

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕರ್ನಾಟಕ**

ಜಿಲ್ಲೆ:________________ ತಾಲೂಕ:______________

ಗ್ರಾಮ ಪಂಚಾಯತಿ : ___________

ದಿನಾಂಕ:__________

MATE REGISTRATION FORM

| | |
|---|---|
| Village Name ಹಳ್ಳಿಯ ಹೆಸರು | |
| NREGA Job Card Number ಉದ್ಯೋಗ ಚಿಟಿ ಸಂಖ್ಯೆ | |
| Worker Name As per Bank/Post ನಿಮ್ಮ ಹೆಸರು ಬ್ಯಾಂಕ್ ಖಾತೆಯಲ್ಲಿರುವಂತೆ ಇಂಗ್ಲಿಷ್ ನಲ್ಲಿ ಮಾತ್ರ ನಮೂದಿಸಿ: | |
| Worker Designation ಹುದ್ದೆಯನ್ನು : | Mate |
| Worker Type : | Semi-Skilled |
| Father's Name | |
| Cast | SC/ST/OBC/Other |
| Whether BPL Family Id No: | |
| Wage Rate per day | 349 |
| Aadhaar No : | |
| Mobile No. | |
| Gender | Male/Female/Transgender |
| Age | |
| Bank Name | |
| Account No. | |
| IFSC Code | |
| SHG ಸಂಘದ ಸದಸ್ಯರೆ ? | ಹೌದು/ಇಲ್ಲ |
| SHG ಸಂಘದ ಸದಸ್ಯರಾದಲ್ಲಿ ವಿವರ | |
| ನೊಂದಾಯಿಸಿದ ನಂತರ ಸೃಜನೆಯಾಗುವ ಮೇಟ್ ನೋಂದಣಿ ಸಂಖ್ಯೆ: | |

ಈ ಮೇಲಿನ ವಿವರಗಳೊಂದಿಗೆ ಗ್ರಾಮ ಪಂಚಾಯತಿ ಅಥವಾ ತಾಲೂಕ ಪಂಚಾಯತಿಯಾ ಡಾಟಾ ಎಂಟ್ರಿ ಲಾಗಿನ್ ನಲ್ಲಿ ಮಾಹಿತಿ ಇಂದಿಕರಿಸುವುದು. ಇಂದಿಕರಿಸಿದ ನಂತರ ನರೇಗ ತಂತ್ರಾಂಶದಲ್ಲಿ ಲಭ್ಯವಾದ ಮೇಟ್ ನೋಂದಣಿ ಸಂಖ್ಯೆಯನ್ನು ಉದ್ಯೋಗ ಚೀಟಿಯಲ್ಲಿ ನಮೂದಿಸಿ ಕೊಡುವುದು.

24/5

ಅರ್ಜಿದಾರರ ಸಹಿ